## O.S. 115/2015 DW-01

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

24. ನಾವು ಆದಾಯ ತೆರಿಗೆ ನಿಯಮದ ಪ್ರಕಾರ ಎಲ್ಲಾ ಅಕೌಂಟ ಬರೆದು ತೋರಿಸಬೇಕಾಗುತ್ತದೆ ಎಂದರೆ ಸರಿ. 40 ಲಕ್ಷ ಕ್ಕಿಂತ ಮೇಲಿನ ವ್ಯವಹಾರ ಆದರೆ ಸಿ ಎ ಮುಖಾಂತರ ಅಡಿಟ್ ಮಾಡಿಸಿ ಆದಾಯ ತೆರಿಗೆ ಇಲಾಖೆಗೆ ಕೊಡಬೇಕು ಎಂದರೆ ಸರಿ. ನಮ್ಮ ಸಿ ಎ ಸುಮೇದ ಓಸವಾಲ. ಈವತ್ತಿಗೂ ಅವರೇ ಇದ್ದಾರೆ. ಕೃಷಿ ಆದಾಯ ಇದ್ದರೇ ತೋರಿಸಬೇಕು ಎಂದರೆ ಸರಿ. ನಮಗೆ ಕೃಷಿ ಆದಾಯ ಇಲ್ಲ ಆ ಕಾರಣ ಆದಾಯ ತೆರಿಗೆ ಇಲಾಖೆಗೆ ಅಕೌಂಟ ತೋರಿಸಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಅದರಲ್ಲಿ ಬೆಳೆ ಬೆಳೆದಿಲ್ಲ. ದಾವಾ ಆಸ್ತಿಯಲ್ಲಿ ಸ್ಥಳಕ್ಕೆ ಹೋಗಿ ಕೃಷಿ ಮಾಡಿಲ್ಲ. ಖರೀದಿ ಪತ್ರದಲ್ಲಿ ತೋರಿಸಿದ ನಗದು ಹಣ ನಮ್ಮ ಬ್ಯಾಲೆನ್ಸ ಶೀಟನಲ್ಲಿ ತೋರಿಸಿದ್ದು ಬಹಳ ದಿನ ಆಗಿದ್ದರಿಂದ ನೆನಪಿಲ್ಲ. ಬ್ಯಾಲೆನ್ಸ ಶೀಟ ಸಿಕ್ಕರೆ ಹಾಜರುಪಡಿಸಿರುತ್ತೇನೆ. 10 ವರ್ಷ ಆದ ನಂತರ ದಾಖಲೆಗಳನ್ನು ನಾಶಪಡಿಸುತ್ತಾರೆ. ಕಂಪ್ಯೂಟರನಲ್ಲಿ ಆಟೋಮೆಟಿಕ್ ಆಗಿ ನಾಶವಾಗುತ್ತವೆ. ಆದಾಯ ತೆರಿಗೆ ಇಲಾಖೆಗೆ ತೋರಿಸಿದ ಬ್ಯಾಲೆನ್ಸ ಶೀಟ ನಮ್ಮ ಹತ್ತಿರ ಮತ್ತು ಸಿ ಎ ಹತ್ತಿರ ಇರುತ್ತವೆ ಎಂದರೆ ಸರಿ. ಇದ್ದರೆ ದಾಖಲೆ ಹಾಜರುಪಡಿಸುತ್ತೇನೆ. ದಾವಾ ಆಸ್ತಿ ಮಂಜುನಾಥ ನಗರದ ಕೊನೆಗೆ ಇರಬಹುದು. ಸದರಿ ಆಸ್ತಿಯ ಪ್ರಸ್ತುತ ಮೌಲ್ಯ 4 ಕೋಟಿ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿ ಮನೆ ಕಟ್ಟಿವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಬಹಳ ದಿವಸ ಆಯಿತು ಹೋಗಿಲ್ಲ. 2-3 ವರ್ಷ ದಿಂದ ದಾವಾ ಆಸ್ತಿಯ ಕಡೆ ಹೋಗಿರುವುದಿಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ಮತ್ತು 2 ರವರು 2016 ರಿಂದ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ನಾನು ನೋಡಿಲ್ಲ ಕಂಡು ಬಂದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದ್ದೇನೆ. ಈಗ ಸಾಕ್ಷಿಗೆ 3 ಪೊಟೋಗಳಾದ ನಿಪಿ.29 ನ್ನು ತೋರಿಸಲಾಗಿ ಅದರಲ್ಲಿ ಮನೆ ಇವೆ ಅಂದರೆ ಸರಿ. ಸದರಿ ಮನೆಗಳು ದಾವಾ ಆಸ್ತಿಯಲ್ಲಿವೆ ಅಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಮನೆ ಇದ್ದ ಬಗ್ಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

25. ನಿಜವಾಗಿಯೂ ದಾವಾ ಆಸ್ತಿ ಖರೀದಿ ಮಾಡಿದ್ದರೆ ನಾವು ಕೃಷಿ ಮಾಡುತ್ತಿದ್ದೆವು, ಮನೆ ಕಟ್ಟಲು ತಕರಾರು ಮಾಡುತ್ತಿದ್ದೆವು ಅಂದರೆ ಸರಿಯಲ್ಲ. ಉಳಿದ ಪ್ರತಿವಾದಿಗಳ ನಂಃ 5 ಹಾಗೂ 6 ರ ಪರವಾಗಿ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ. ಅವರ ಸಾಕ್ಷಿ ಮಾಡಿಸುವುದಿಲ್ಲ. ಪ್ರತಿವಾದಿ -5 ಹಾಗೂ 6 ರ ಪರವಾಗಿ ನಾನು ಸಾಕ್ಷಿನುಡಿಯುತ್ತಿದ್ದೇನೆ, ಅವರ ಬಗ್ಗೆ ಮಾಹಿತಿ ಇದೆ. ಪ್ರತಿವಾದಿ 5 ಹಾಗೂ 6 ರ ಪರವಾಗಿ ಬ್ಯಾಲೆನ್ಸ ಶೀಟ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನಿಡಿ.3 ರಲ್ಲಿ 5 ನೇ ಪ್ರತಿವಾದಿ 1 ಹಾಗೂ 2 ರವರಿಗೆ ಹಣ ಕೊಟ್ಟ ಬಗ್ಗೆ ನಮೂದು ಇದೆ.

**O.S. 115/2015 DW-01**

ಖರೀದಿ ಪತ್ರದಲ್ಲಿ ತೋರಿಸಿದ ಹಣ ನಿಡಿ.3 ರಲ್ಲಿ ಇಲ್ಲ ಅಂದರೆ ಸರಿಯಲ್ಲ. ದಿಃ 8.2.2011 ರಂದು ಹಣ ಕೊಡಲಾಗಿದೆ. ದಿಃ 21.10.2010 ರಂದು ಸತೀಶನ ಖಾತೆಯಲ್ಲಿ 3 ಲಕ್ಷ 78 ಸಾವಿರ ರೂ. ಇತ್ತು. 3 ಲಕ್ಷ ರೂ. ಖಾತೆಯಲ್ಲಿದ್ದ ವ್ಯಕ್ತಿ 6 ಲಕ್ಷ ರೂ. ಚೆಕ್ ಕೊಡುವುದು ತಪ್ಪು ಅಂದರೆ ಸರಿಯಲ್ಲ. 3 ಲಕ್ಷ ರೂ. ಖಾತೆಯಲ್ಲಿದ್ದ ವ್ಯಕ್ತಿ 6 ಲಕ್ಷ ರೂ. ಚೆಕ್ ಕೊಟ್ಟರೆ ಮಾನ್ಯವಾಗುತ್ತದೆ ಅಂದರೆ, ಎಲ್ಲ ಚೆಕ್ ಗಳು ಮಾನ್ಯವಾಗಿವೆ ಎಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿ 1 ಲಕ್ಷದಾ 59 ಸಾವಿರದಾ 999 ರೂ. ಗಳನ್ನು ನಗದಾಗಿ ಕೊಡಲಾಗಿದೆ ಎಂದು ನಮೂದಾಗಿದೆ ಅಂದರೆ ಸರಿ. ಪ್ರತಿವಾದಿ 1 ಹಾಗೂ 2 ರವರಿಗೆ ಸದರಿ ಹಣವನ್ನು ಕೊಟ್ಟಿದ್ದೇವೆ. ಇಂತಹವರಿಗೆ ಕೊಟ್ಟಿದ್ದೇವೆ ಅಂತಾ ಖರೀದಿ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಖರೀದಿ ಪತ್ರದಲ್ಲಿ ಉಪ-ನೋಂದಣಾಧಿಕಾರಿ ಸಮಕ್ಷಮ ಹಣ ಕೊಟ್ಟ ಬಗ್ಗೆ ನಮೂದು ಇಲ್ಲ ಅಂದರೆ ಸರಿ. ಹಾಗೂ ಅವರ ಶರಾ ಇಲ್ಲ ಅಂದರೆ ಸರಿ. ದುರದ್ದೇಶಪೂರ್ವಕವಾಗಿ ಸದರಿ ಹಣ ಕೊಟ್ಟಿಲ್ಲ, ಆ ಕಾರಣದಿಂದ ನಮೂದು ಇಲ್ಲ ಅಂದರೆ ಸರಿ. ನಿಜವಾಗಿಯೂ ನಾವು ಹಣ ಕೊಟ್ಟಿದ್ದರೆ ಉಪ-ನೋಂದಣಾಧಿಕಾರಿ ಮುಂದೆ ಹಣ ಕೊಟ್ಟು ಶರಾ ಬರೆಸುತ್ತಿದ್ದೆವು ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರು ಆಸ್ತಿ ಮಾಲಿಕರ ಕಾಲಂದಲ್ಲಿ ಹೆಸರು ಇದೆ ಅಂದರೆ ಸರಿ. ಆಸ್ತಿ ಮಾಲೀಕರ ಜೊತೆಗೆ ವ್ಯವಹಾರ ಮಾಡಬೇಕಾಗುತ್ತದೆ ಅಂದರೆ ಸರಿ. ಅವರನ್ನು ಬಿಟ್ಟು ಬೇರೆಯವರ ಜೊತೆಗೆ ವ್ಯವಹಾರ ಮಾಡಿದರೆ ಅದು ಬಂಧನಕಾರಿಯಾಗುವುದಿಲ್ಲ ಅಂದರೆ ಸರಿ. ದಾಖಲೆಯಲ್ಲಿ ಯಾರ ಹೆಸರು ಇರುತ್ತದೆ, ಅವರಿಗೆ ಹಣ ಸಂದಾಯವಾಗಬೇಕು ಅಂದರೆ ಸರಿ. 6 ಲಕ್ಷ ರೂ, ಹಣ ಪ್ರತಿವಾದಿ 1 ಹಾಗೂ 2 ರವರಿಗೆ ಮುಟ್ಟಿಲ್ಲ ಅಂದರೆ ಸರಿಯಲ್ಲ. ನಾವು ಲಿಸ್ಟ ಪ್ರಕಾರ ಹಣ ಕೊಟ್ಟಿದ್ದೇವೆ. 6 ಲಕ್ಷ ರೂ, ಹಣವನ್ನು ಚೆಕ್ ಮೂಲಕ ಕೊಟ್ಟಿದ್ದೇವೆ. ಎಲ್ಲಾ ಹಣವನ್ನು ಒಂದನೇ ಪ್ರತಿವಾದಿಗೆ ಕೊಟ್ಟಿದ್ದೇವೆ. ದಿಃ 21.10.2010 ರಂದು 5 ನೇ ಪ್ರತಿವಾದಿ ಬಳಿ 1 ಲಕ್ಷದಾ 19 ಸಾವಿರ ರೂ. ಹಣ ಇದ್ದ ಬಗ್ಗೆ ಬ್ಯಾಂಕ ಸ್ಟೇಟಮೆಂಟ ಹಾಗೂ ಬ್ಯಾಲೆನ್ಸ ಶೀಟ ಹಾಜರಪಡಿಸಿಲ್ಲ ಅಂದರೆ, ಇದ್ದರೆ ಹಾಜರಪಡಿಸುತ್ತೇನೆ. 5 ನೇ ಪ್ರತಿವಾದಿ ವ್ಯವಹಾರಸ್ಥರು ಹಾಗೂ ಆದಾಯದ ಪ್ರಕಾರ ದಾಖಲೆ ಇಡಬೇಕಾಗುತ್ತದೆ ಅಂದರೆ ಸರಿ. 40 ಲಕ್ಷ ರೂ. ಗಿಂತ ವ್ಯವಹಾರ ಹೆಚ್ಚಾದ್ದರೆ ಸಿ ಎ ಮೂಲಕ ಅಡಿಟ್ ಆಗಿ ಆದಾಯ ಕೊಡಬೇಕಾಗುತ್ತದೆ ಅಂದರೆ ಸರಿ. ಅವರ ವ್ಯವಹಾರದ ಬಗ್ಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿಲ್ಲ ಅಂದರೆ ಗೊತ್ತಿಲ್ಲ. ಅಧಿಕಾರ ಪತ್ರ ಇಲ್ಲದೆ ಸಾಕ್ಷಿ ನುಡಿಯಲು ಬರುವುದಿಲ್ಲ ಅಂದರೆ ಸರಿ.

**O.S. 115/2015 DW-01**

ಪ್ರತಿವಾದಿಗಳಿಗೆ ಗೊತ್ತಿಲ್ಲದೆ ಹಾಗೆ ಸೂಕ್ತ ಮಾಹಿತಿ ಕೊಡದೇ, ಖರೀದಿ ಪತ್ರ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಸಾಲ ಪತ್ರ ಅಂತಾ ಹೇಳಿ, ಹಣ ಕೊಡದೇ ಸಹಿ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಜವಾಗಿಯೂ ಹಣ ಕೊಟ್ಟಿದ್ದರೆ ಬೆಳೆ ಬೆಳೆಯುತ್ತಿದ್ದರು ಅಂದರೆ ಸರಿಯಲ್ಲ.

26. ದಿಃ 21.10.2010 ರಂದು 6 ನೇ ಪ್ರತಿವಾದಿ ಖಾತೆಯಲ್ಲಿ 8 ಲಕ್ಷದಾ 54 ಸಾವಿರದಾ 231/- ರೂ. ಇದೆ. ಪ್ರತಿವಾದಿ 1 ಹಾಗೂ 2 ರವರಿಗೆ ದಿಃ 9.2.2011 ರಂದು 12 ಸಾವಿರದಾ 858/- ರೂ. ಹೋಗಿದೆ. ದಿಃ 9.1.2015 ರಂದು ರೂ, 30,000/- ರೂ. ಹೋಗಿದೆ. ಖರೀದಿ ಪತ್ರದ ಪ್ರಕಾರ ಪ್ರತಿವಾದಿ 1 ಹಾಗೂ 2 ರವರಿಗೆ 4 ಲಕ್ಷದಾ 50 ಸಾವಿರ ರೂ. ಮುಟ್ಟಿಲ್ಲ ಅಂದರೆ ಸರಿಯಲ್ಲ. ಮೂಲ ಮಾಲೀಕರನ್ನು ಬಿಟ್ಟು ಬೇರೆಯವರನ್ನು ಖರೀದಿ ಪತ್ರವನ್ನು ತೋರಿಸಿದ್ದರಿಂದ ಅವರಿಗೆ ಬಂಧನಕಾರಿಯಾಗುವುದಿಲ್ಲ ಅಂದರೆ ಸರಿಯಲ್ಲ. ಖರೀದಿ ಪತ್ರಗಳಿಗೆ ಆ ಊರಿನವರನ್ನು ಸಾಕ್ಷಿ ದಾರರನ್ನಾಗಿ ಮಾಡಿಲ್ಲ ಅಂದರೆ ಸರಿಯಲ್ಲ. ಗಜಾನನ ಅಣ್ವೇಕರ ಹಾಗೂ ಇನ್ನೊಬ್ಬರು ಯಾರೆಂದು ಗೊತ್ತಿಲ್ಲ. ನಿಜವಾಗಿಯೂ ವ್ಯವಹಾರದ ಲಕ್ಷಣದಲ್ಲಿ ಊರಿನ ಹಿರಿಯರು ಸಹಿ ಮಾಡುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಹುಬ್ಬಳ್ಳಿಯವರು ಇರಬಹುದು. ದಾವಾ ಆಸ್ತಿ ಗೋಪನಕೊಪ್ಪದಲ್ಲಿದೆ. ನಂತರ ಹುಬ್ಬಳ್ಳಿಯಲ್ಲಿದೆ ಅಂತಾ ಹೇಳುತ್ತಾರೆ. ನಿಡಿ.7 ರಲ್ಲಿ ಒಬ್ಬರೇ ಸಾಕ್ಷಿದಾರರು ಇದ್ದಾರೆ ಅಂದರೆ ಸರಿ. ಬರೆದುಕೊಟ್ಟ ಚೆಕ್ ಗಳನ್ನು ಅವರು 6 ತಿಂಗಳ ಒಳಗಡೆಗೆ ಹಾಜರಪಡಿಸದ ಕಾರಣ ನಿಡಿ.7 ನ್ನು ಮಾಡಿಕೊಂಡಿದ್ದೇವೆ. 6 ತಿಂಗಳು ಅಂದರೆ 2011 ರಲ್ಲಿ ಏಕೆ ಮಾಡಿಕೊಂಡಿಲ್ಲ ಅಂದರೆ, ಅವರು ಬಂದಾಗ ಮಾಡಿಕೊಂಡಿದ್ದೇವೆ ಅಂತಾ ನುಡಿಯುತ್ತಾರೆ. ನಿಡಿ.7 ರಲ್ಲಿ ಪ್ರತಿವಾದಿಗಳು ತಡವಾಗಿ ಬಂದ ಬಗ್ಗೆ ನಮೂದು ಇಲ್ಲ ಅಂದರೆ ಸರಿ. ನಿಡಿ.7 ರಿಂದ 9 ರಲ್ಲಿ ಒಬ್ಬರೇ ಸಾಕ್ಷಿದಾರರು ಇದ್ದಾರೆ ಅಂದರೆ ಸರಿ. ನಿಡಿ.7 ರಿಂದ 9 ರಲ್ಲಿ ತೋರಿಸಿದ ಚೆಕ್ ನ ಹಣ ಪ್ರತಿವಾದಿ 1 ಹಾಗೂ 2 ರವರಿಗೆ ಮುಟಿಲ್ಲ ಅಂದರೆ ಸರಿಯಲ್ಲ. ಚೆಕ್ ಬರೆದು ಹಣ ಕೊಡದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಜವಾಗಿಯೂ ದಾಖಲೆ ಮಾಡಬೇಕೆಂದರೆ ಊರಿನ ಹಿರಿಯರ ಸಮಕ್ಷಮ ಹಾಗೂ ನೋಟರಿ ಮೂಲಕ ಮಾಡುತ್ತಿದ್ದೆವು ಅಂದರೆ ಸರಿಯಲ್ಲ.

**O.S. 115/2015** **DW-01**

ನಾವು ಹಾಗೂ ಅಣ್ವೇಕರ ರವರು ಸೇರಿ, ಪ್ರತಿವಾದಿ 1 ಹಾಗೂ 2 ರವರಿಗೆ ಮೋಸ ಮಾಡಿದ್ದೇವೆ ಅಂದರೆ ಸರಿಯಲ್ಲ. ಅವರು ಅವಿದ್ಯಾವಂತ ರಾಗಿದ್ದರಿಂದ ಅವರಿಂದ ದುರ್ಲಾಭ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿಡಿ.7 ರಿಂದ 9 ರವರು ಸೃಷ್ಟಿ ದಾಖಲೆ ಅಂದರೆ ಸರಿಯಲ್ಲ.

**ಶ್ರೀ ಕೆ ಹೆಚ್ ಹೆಚ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ,**
**ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.